

ಚಾರಣಿಗರಿಗೆ ಬೇಕಾದ ಸಾಮಾನುಗಳನ್ನು ಹೊತ್ತು ತರುವ ಕುದುರೆಗಳು ಹಾಗೂ ಪೋರ್ಟರ್‌ಗಳು

## ‘ಚಾರಣ’ಕ್ಕೆ ಜೀವ ತುಂಬುವವರು...

ಚಾರಣದ ಏಜೆನ್ಸಿಗಳ ಬಗ್ಗೆ ಒಂದಿಷ್ಟು ಹೇಳಬೇಕು. ನಮ್ಮಂತಹ ಚಾರಣ ವ್ಯಸನಿಗಳಿಗೆ ಸಹಾಯ ಮಾಡಲೆಂದು ಹಲವು ಏಜೆನ್ಸಿಗಳಿವೆ. ಇಂತಹ ಟೂರ್ ಆಪರೇಟರ್‌ಗಳು ಹೆಚ್ಚೂ ಕಡಿಮೆ ಹಿಮಾಲಯಕ್ಕೆ ಹೊಂದಿಕೊಂಡ ಎಲ್ಲ ರಾಜ್ಯಗಳ ಪ್ರಮುಖ ನಗರಗಳಲ್ಲಿದ್ದು, ಚಾರಣ ತಂಡಗಳಿಗೆ ಮಾರ್ಗದರ್ಶನ ಹಾಗೂ ಊಟ–ವಸತಿ ಸೇವೆ ಕೊಡಲು ಸದಾ ಬದ್ಧರಾಗಿರುತ್ತಾರೆ.

ಐದು ತಿಂಗಳ ಮುಂಚೆಯೇ ಏಜೆನ್ಸಿ ಸಂಪರ್ಕಿಸಿ, ಮುಂಗಡ ಹಣಕೊಟು ಕಾಯ್ದಿರಿಸಿಕೊಂಡರೆ ಚಾರಣ ಸುಗಮವಾಗುತ್ತದೆ. ಇವರ ತಂಡದಲ್ಲಿ ಒಬ್ಬ ಅನುಭವಿ ಮಾರ್ಗದರ್ಶಕ, ಅನುಭವಿ ಅಡುಗೆಭಟ್ಟ, ಹಲವಾರು ಸಹಾಯಕರ ಜೊತೆಗೆ ಕುದುರೆಗಳು ಇರುತ್ತವೆ. ಇಡೀ ಪ್ರವಾಸಿ ಚಾರಣ ತಂಡವನ್ನು ಹುರಿದುಂಬಿಸುತ್ತಾ ಒಂದು ವೇಗದಲ್ಲಿ ಎಲ್ಲರನ್ನೂ ಮುಂದಿನ ತಾಣಕ್ಕೆ ಸುರಕ್ಷಿತವಾಗಿ ತಲುಪಿಸುವುದು, ಮಾರ್ಗ ಮಧ್ಯೆ ಉಂಟಾಗಬಹುದಾದ ತೊಂದರೆಗಳ ಬಗ್ಗೆ ಎಚ್ಚರಿಕೆ ಮಾಹಿತಿ ಕೊಡುವುದು ಮಾರ್ಗದರ್ಶಕನ ಹೊಣೆ.

ಸಹಾಯಕರೆಲ್ಲರೂ ಚಾರಣ ತಂಡಕ್ಕೆ ಬೇಕಾದ ಸೀಮೆಎಣ್ಣೆ, ಗ್ಯಾಸ್ ಸಿಲಿಂಡರ್, ತರಕಾರಿ, ಧಾನ್ಯ, ಅಡುಗೆ ಪದಾರ್ಥಗಳು, ಎಲ್ಲವನ್ನೂ ಹೊತ್ತು ತರುತ್ತಾರೆ. ಒಬ್ಬೊಬ್ಬರೂ ಸುಮಾರು 30–40 ಕೆ.ಜಿ. ಭಾರದ ಬ್ಯಾಗ್‌ಗಳನ್ನು ಹಿಡಿದು ಅನಾಯಾಸವಾಗಿ ಸಾಗುತ್ತಾರೆ. ಕುದುರೆಗಳ ಮೇಲೆ ಚಾರಣ ತಂಡದ ಸಾಮಾನುಗಳು, ಡೇರೆಗಳನ್ನು ಸಾಗಿಸುತ್ತಾರೆ. ಚಾರಣಿಗರು ಬರೀ ನೀರು, ಕ್ಯಾಮೆರಾ, ತಿಂಡಿ ಒಯ್ಯುತ್ತಾರೆ. ಅವರ ಬಟ್ಟೆಗಳು ಹಾಗೂ ಹೆಚ್ಚಿನ ಸಾಮಾನುಗಳನ್ನು ಕುದುರೆ ಮೇಲೆ ಸಾಗಿಸುತ್ತಾರೆ.

ಪರ್ಸನಲ್ ಪೋರ್ಟರ್‌ಗಳೂ ಲಭ್ಯ. ಅಂದರೆ, ಒಬ್ಬ ಚಾರಣಿಗನಿಗೆ ಒಬ್ಬ ಪೋರ್ಟರ್ ಜೊತೆಯಲ್ಲಿದ್ದು, ಇಡೀ ಚಾರಣದುದ್ದಕ್ಕೂ ನೀರು ಸಮೇತ ಎಲ್ಲ ಸಾಮಾನುಗಳನ್ನು ಹೊತ್ತು ತರುತ್ತಾನೆ. ಚಾರಣಿಗನಿಗೆ ಕಡಿದಾದ ಕೊರಕಲುಗಳಲ್ಲಿ, ಇಕ್ಕಟ್ಟಾದ ಸಂದುಗಳಲ್ಲಿ ಹೇಗೆ ಉಪಾಯವಾಗಿ ಸಾಗಬೇಕೆಂದು ಸೂಚಿಸುತ್ತಾ, ದಣಿವಾದ ಚಾರಣಿಗನಿಗೆ ಬಲವಂತವಾಗಿ ‘ನೀರು ಕುಡಿಸುತ್ತಾ’ ಸಹಾಯ ಮಾಡುತ್ತಾನೆ. ಚಾರಣದಲ್ಲಿ ಮಧ್ಯೆ ಮಧ್ಯೆ ನೀರು ಕುಡಿಯುವುದು ಬಹಳ ಮುಖ್ಯ.

## ಶ್ವೇತಶಿಖರಗಳ ಮೋಹಕ ರೂಪ

ರಾತ್ರಿ ಚಳಿ ಸುಮಾರು 6–7 ಸೆಂ. ಇದ್ದಿತೆಂದು ನಮ್ಮ ಗೈಡ್ ಊಹಿಸಿದರು. ಎಲ್ಲರಿಗೂ ಆಯಾಸ ಆಗಿದ್ದರಿಂದ ಗೊರಕೆ ಸಹಿತ ನಿದ್ದೆ ಮಾಡಿದೆವು. ನಾವು ಕ್ಯಾಂಪ್ ಮಾಡಿದ್ದ ಈ ಜಾಗದಲ್ಲಿ ಚಳಿಗಾಲದಲ್ಲಿ ಸುಮಾರು 5ರಿಂದ 7 ಅಡಿ ಎತ್ತರದಷ್ಟು ಹಿಮ ಬೀಳುತ್ತದಂತೆ. ನಾವು ಜೂನ್‌ನಲ್ಲಿ ಚಾರಣ ಹೋದ್ದರಿಂದ ಹಿಮವೆಲ್ಲ ಕರಗಿ 5 ಸೆಂ. ಚಳಿ ಮಾತ್ರವೇ ಇತ್ತು! ಇನ್ನೂ ಮೇಲೆ ಹೋದಂತೆ, ರಾತ್ರಿಗೆ ಆ ಚಳಿ 3–4 ಸೆಲ್ಸಿಯಸ್‌ಗೂ ಇಳಿಯುತ್ತಂತೆ. ನಾವು ಈಗಾಗಲೇ 9000 ಸಾವಿರ ಅಡಿ ಮೇಲೆ ಬಂದಿದ್ದೇವೆ ಎಂದು ಗೈಡ್ ಘೋಷಿಸಿದ.

ಮರುದಿನ ಬೆಳಿಗ್ಗೆ 7 ಗಂಟೆಗೇ ಉಪಾಹಾರ ಮುಗಿಸಿ ಚಾರಣ ಶುರು ಮಾಡಿದೆವು. ಹುಲ್ಲುಹಾಸಿನ ಮೇಲೆ ಹಿಮಗಟ್ಟಿದ ಇಬ್ಬನಿಯ ಮಣಿಗಳು ಕಂಡುಬಂದವು. ಬರ್ನಾಲಾದಿಂದ

